# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ನಂ. 04/21 ದಿನಾಂಕ:21-11-2020

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

**ವಿಷಯ:-** ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:21-11-2020 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕ್ಛಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದವರ ವಿವರಗಳು:</u>

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಡಾ॥ಸುರೇಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ಎನ್.ವೆಂಕಟೇಶ್ | ಕಾರ್ಯದರ್ಶಿ |
| 3 | ಶ್ರೀ.ಎಂ.ದೇವರಾಜ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ರಘುನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ರವಿಚಂದ್ರನ್ | ಸಹಾಯಕ ಅಭಿಯಂತರರು ಬೃಹತ್ ರಸ್ತೆಗಳು |
| 6 | ಶ್ರೀ.ರಾಜಶ್ರೀ | ದೊಡ್ಡನೆಕ್ಕುಂದಿ, ಸಾರ್ವಜನಿಕರು |
| 7 | ಶ್ರೀ.ಸುಂದರ್ | ಕಾರ್ಯದರ್ಶಿಗಳು, ಎಇಸಿಎಸ್ ಬಡಾವಣೆ |
| 8 | ಶ್ರೀ.ಚಂದ್ರಾ ರೆಡ್ಡಿ | ಕುಂದಲಹಳ್ಳಿ ಕಾಲೋನಿ |
| 9 | ಶ್ರೀ.ಜಗದೀಶ್ | ಬಿಬಿಎಂಪಿ,ವಿದ್ಯುತ್ ಶಾಖೆ |
| 10 | ಶ್ರೀ.ರವೀಂದ್ರ | BWSSB |
| 11 | ಶ್ರೀ.ಪ್ರದೀಪ್ ಗೌಡ | ಸಬ್ ಇನ್ಸ್‌ಪೆಕ್ಟರ್, ಹೆಚ.ಎ.ಎಲ್ ಠಾಣೆ |
| 12 | ಶ್ರೀ.ಸಂಜಯ್.ಎಸ್ | ಸಹಾಯಕ ಅಭಿಯಂತರರು, ಬಿಬಿಎಂಪಿ, ವಿದ್ಯುತ್ಚ್ಛಕ್ತಿ ವಿಭಾಗ |
| 13 | ಶ್ರೀ.ಜುಡೆ | ದೊಡ್ಡನೆಕ್ಕುಂದಿ, ಸಾರ್ವಜನಿಕರು |
| 14 | ಶ್ರೀ.ಜಿ.ಎನ.ವೆಂಕಟೇಶ್ | ಅದ್ಯಕ್ಷರು, ಎ.ಇ.ಸಿ.ಎಸ್ ಬಡಾವಣೆ |

ಶ್ರೀ.ಎಂ.ದೇವರಾಜ್, ಹಿರಿಯ ಆರೋಗ್ಯ ಪರಿವೀಕ್ಷಕರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ.ಡಾ॥ಸುರೇಶ್.ಆರ್., ಶ್ರೀ.ಎನ್.ವೆಂಕಟೇಶ್, ಕಾರ್ಯದರ್ಶಿ, ಬಡಾವಣೆಯ ಸಂಘ ಸಂಸ್ಥೆರವರು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಸಭೆಯಲ್ಲಿ ದಿನಾಂಕ:07-11-2020 ರಂದು ನಡೆದ ನಡುವಳಿಗಳನ್ನು ಶ್ರೀ.ಎಂ.ದೇವರಾಜ್ ರವರು ವಿವರಿಸಿದರು.
2. ಸಭೆಯಲ್ಲಿ ಶ್ರೀ.ಚಂದ್ರಾರೆಡ್ಡಿ, ರವರು ಕುಂದಲಹಳ್ಳಿ ಕಾಲೋನಿಯಲ್ಲಿ ಈಗಾಗಲೇ ಗೇಲ್ ಗ್ಯಾಸ್ ಗುತ್ತಿಗೆದಾರರಿಂದ ರಸ್ತೆ ಅಗೆತದ ಪುನರ್ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಕೈಗೊಳ್ಳಲು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಅಭಿಯಂತರರು, ಎನ್.ವೆಂಕಟೇಶ್ ರವರು ವಿಷಯವನ್ನು ಗೇಲ್‌ಗ್ಯಾಸ್ ರವರಿಗೆ ತಿಳಿಸುವುದಾಗಿ ಹಾಗೂ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಲು ಭರವಸೆ ನೀಡಿದರು.
3. ಎಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, 60 ಅಡಿ ಮುಖ್ಯರಸ್ತೆಯಲ್ಲಿ ವಿದ್ಯುತ್ ಕಂಬಗಳನ್ನು ರಸ್ತೆಯ ಬದಿಗೆ ಸ್ಥಳಾಂತರಿಸಲು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ರವೀಚಂದ್ರನ್, ಸಹಾಯಕ ಅಭಿಯಂತರರು, ಈಗಾಗಲೇ ಕಡತವನ್ನು ವಿದ್ಯುತ್‌ಚ್ಛಕ್ತಿ ಇಲಾಖೆಗೆ ಸಲ್ಲಿಸಲಾಗಿದ್ದು, ಇಲಾಖೆಯ ಮುಖ್ಯ ಅಭಿಯಂತರರು ಸಹಿಗಾಗಿ ಮಂಡಿಸಲಾಗಿದೆ ಎಂದು ಬೆಸ್ಕಾಂ ಇಲಾಖೆ ವತಿಯಿಂದ ವಿಷಯವು ತಿಳಿದು ಬಂದಿರುತ್ತದೆ ಎಂದು ತಿಳಿಸಿದರು.
4. ಎ.ಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು ಮಕ್ಕಳ ಆಟ ಪೀಠೋಪಕರಣಗಳನ್ನು ಉದ್ಯಾನವನದಲ್ಲಿ ತುರ್ತಾಗಿ ಅಳವಡಿಸಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು, ವಾರ್ಡ್ ನಂ.85 ರವರು ಸದರಿ ಅಂದಾಜು ಪಟ್ಟಿಯು ಟೆಂಡರ್ ಹಂತದಲ್ಲಿದ್ದು, ಅತೀ ಶೀಘ್ರದಲ್ಲೇ ಕಾಮಗಾರಿಯು ಪ್ರಾರಂಭವಾಗುವ ಬಗ್ಗೆ ಭರವಸೆ ನೀಡಿದರು.
5. ಶ್ರೀ.ಪ್ರದೀಪ್ ಗೌಡ ಸಬ್ ಇನ್ಸ್‌ಪೆಕ್ಟರ್, ಹೆಚ.ಎ.ಎಲ್ ಠಾಣೆರವರು ದೊಡ್ಡನೆಕ್ಕುಂದಿ ಪ್ರದೇಶದಲ್ಲಿ ಸಿಸಿ ಕ್ಯಾಮರಗಳನ್ನು ಅಳವಡಿಸಲು ಹಾಗೂ ಈಗಾಗಲೇ ಅಳವಡಿಸಿರುವ ಕೆಲವು ಸಿಸಿ ಕ್ಯಾಮರಗಳ ಬಗ್ಗೆ ದುರಸ್ತಿಯಲ್ಲಿರುವ ಬಗ್ಗೆ ಪ್ರಸ್ತಾಪ ಮಾಡಿದರು. ಸದರಿ ವಿಷಯಕ್ಕೆ ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು, ರವರು ಸಿಸಿ ಕ್ಯಾಮರ ಕಡತವು ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಅತೀ ಶೀಘ್ರದಲ್ಲೇ ಕಾಮಗಾರಿಯು ಪ್ರಾರಂಭವಾಗುವ ಬಗ್ಗೆ ಭರವಸೆ ನೀಡಿದರು.
6. ಶ್ರೀಮತಿ.ರಾಜಶ್ರೀ ರವರು ಶ್ರೀ.ಪ್ರದೀಪ್ ಗೌಡ ಸಬ್ ಇನ್ಸ್‌ಪೆಕ್ಟರ್, ಹೆಚ.ಎ.ಎಲ್ ಠಾಣೆ ರವರಿಗೆ ರಾತ್ರಿ ಪಾಳಿದಲ್ಲಿ ವಾರ್ಡ್ ರಸ್ತೆಗಳಲ್ಲಿ ಗಸ್ತು ಮಾಡಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ಪ್ರದೀಪ್ ಗೌಡ ಸಬ್ ಇನ್ಸ್‌ಪೆಕ್ಟರ್ ರವರು ಮುಂದೆ ನಿರಂತರವಾಗಿ ಗಸ್ತು ಮಾಡಲು ಒಪ್ಪಿಕೊಂಡರು.
7. ಎಇ.ಸಿ.ಎಸ್.ಬಡಾವಣೆಯ ಅಧ್ಯಕ್ಷರು, ಶ್ರೀ.ವೆಂಕಟೇಶ್ ರವರು 60 ಅಡಿ ಮುಖ್ಯರಸ್ತೆಯಲ್ಲಿ ಚರಂಡಿ ಕಾಮಗಾರಿಯು ವಿಳಂಬವಾಗುತ್ತಿರುವುದರಿಂದ ಸದರಿ ಸ್ಥಳಗಳಲ್ಲಿ ಸಂಬಂಧಪಟ್ಟ ಕಟ್ಟಡಗಳಿಗೆ ನೋಟೀಸ್ ನೀಡಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ತಿಳಿಸಿದರು. ಸದರಿ ವಿಷಯಕ್ಕೆ ಸಬಂಧಿಸಿದಂತೆ ಶ್ರೀ.ರವೀಚಂದ್ರನ್, ಸಹಾಯಕ ಅಭಿಯಂತರರು, ರವರು ನೋಟಿಸ್‌ನ್ನು ಜಾರಿ ಮಾಡಿರುವುದಾಗಿ ಹಾಗೂ ತ್ವರಿತವಾಗಿ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದರು.
8. ಶ್ರೀಮತಿ.ರಾಜಶ್ರೀ ರವರು ಕಸವನ್ನು ಸಾಗಿಸಲು ಪುಶ್‌ಕಾರ್ಟ್‌ಗಳನ್ನು ಅಳವಡಿಸುವ ಬಗ್ಗೆ ಕೋರಿದರು. ಸದರಿ ವಿಷಯಕ್ಕೆ ಶ್ರೀ.ರಘುನಂದನ್ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಪುಶ್‌ಕಾರ್ಟ್‌ಗಳನ್ನು ಕೆಲವು ವಾರ್ಡ್‌ಗಳಲ್ಲಿ ದಾನಿಗಳು ನೀಡಿರುತ್ತಾರೆ. ಆದರೆ ವಾರ್ಡ್ ನಂ.85ಕ್ಕೆ ದಾನಿಗಳು ಮುಂದೆ ಬಂದು ಸಹಾಯ ನೀಡಬೇಕೆಂದು ಸಾರ್ವಜನಿಕರಲ್ಲಿ ಕೋರಿದರು.
9. ಸಹಾಯಕ ಅಭಿಯಂತರರು, ಶ್ರೀ.ಸಂಜಯ್ ರವರು ಈಗಾಗಲೇ ಅಳವಡಿಸಿರುವ ರಿಪೇರಿಗೊಂಡ ಬೀದಿ ದೀಪಗಳನ್ನು ಸರಿಪಡಿಸಲಾಗುವುದು ಹಾಗೂ ಹೊಸದಾಗಿ ದೀಪಗಳನ್ನು ಅಳವಡಿಸುವುದು ಅನುದಾನ ನಿರೀಕ್ಷಣೆಯಲ್ಲಿರುವುದಾಗಿ ತಿಳಿಸಿದರು.

10.ಮುಂದಿನ ಸಭೆಗೆ ಇತರೇ ಇಲಾಖೆಗಳಾದ ಅರಣ್ಯ ಸಂಸರಕ್ಷಣಾಧಿಕಾರಿ, ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಭೆಗೆ ಹಾಜರಾಗುಲು ಸಂಬಂಧಪಟ್ಟವರಿಗೆ ತಿಳಿಸಲು ಅಧ್ಯಕ್ಷಕರು ಶ್ರೀ.ಡಾ.ಸುರೇಶ್ ರವರು ಕಾರ್ಯದರ್ಶಿ ರವರಿಗೆ ತಿಳಿಸಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

21/11/2020

ಕಾರ್ಯದರ್ಶಿ
ವಾರ್ಡ್ ನಂ.85

ನೋಡಲ್ ಅಧಿಕಾರಿ ಹಾಗೂ ವಾರ್ಡ್ ಕಮಿಟಿ ಅಧ್ಯಕ್ಷರು
ವಾರ್ಡ್ ನಂ.85